'ಯ್ಯ್... ಯ್ಯಾವಾಗ, ಪಾ? ಯ್ಯ್... ಯ್ಯಾಕೆ?' ಧ್ವನಿ ಶೇಖರಿಸಿಕೊಂಡು ಕೇಳಿದೆ. 'ಇಬ್ಬರೂ ಒಟ್ಟಿಗೇ ಇಲ್ಲವಾ?'

'ಇದ್ದೀವಿ... ನಿನ್ನ ಸಲುವಾಗಿ...' ಪಾ ಗದ್ಗದದ ನಡುವೆ ಆಡಿದ. 'ಐ ಹ್ಯಾವ್ ನೋ ಕ್ಲ್ಯೂ, ಕಿಡೋ... ಇದು ಹೇಗೆ ಮತ್ತು ಯಾಕೆ ಅಂತ ನನಗೆ ಗೊತ್ತಿಲ್ಲ... ಆದರೆ ಆಗಿದೆ ಅನ್ನೋದು ಸತ್ಯ...' ಅಂತನ್ನುತ್ತ ಕಟ್ಟೆಯೊಡೆದ ಕೆರೆಯ ಹಾಗೆ ತನ್ನ ತಾನೇ ಚಚ್ಚಿಕೊಂಡು ಕೊಚ್ಚಿಕೊಂಡು ಹರಿದ. ತನ್ನ ನೆರೆಯಲ್ಲಿ ತಾ ಸಿಲುಕಿ ಮುಳುಗತೊಡಗಿದ. ಸಂತ್ರಸ್ತನಂತೆ ನಿರ್ಗತಿ ತಾಳಿದ. ನಡುನಡುವೆ ತುಸುತುಸುವೇ ಸಂತೈಸಿಕೊಂಡು ಬಿಕ್ಕಿದ. ತಗ್ಗು ದನಿಗೂ ಮಿಕ್ಕು ಬಿಕ್ಕು ಮುಂದಾದವು. ನಾನು ಥೀಸಿಸಿನ ಸಲುವಲ್ಲಿ ದೇಶಾಂತರ ಕೈಕೊಂಡ ತರುವಾಯದ ಇವರಿಬ್ಬರ ಚರಿತ್ರೆ, ಪಾ–ನ ಒಳದುಗುಡದೊಡನೆ ಬೆಸೆದುಕೊಂಡು– ಬಿಟ್ಟು ಬಿಟ್ಟು ಬರುವ ಮಳೆಯ ಹಾಗೆ, ಮೆಲ್ಲಮೆಲ್ಲಗೆಕರೆಯುತ್ತ ಬಂತು. ಕೆಲವೊಮ್ಮೆ ತುಂತುರು. ಹಲವೊಮ್ಮೆ ಧಾರೆ.

'ನಿನ್ನ ಅಮ್ಮನಿಗೆ ಇದ್ದಕ್ಕಿದ್ದ ಹಾಗೆ ಏನಾಯಿತೋ ಏನೋ, ನಾನಿರುವ ಪ್ರಾಪಂಚಿಕತೆಯಿಂದ ಕಳಚಿಕೊಂಡು ಬಿಟ್ಟಳು, ಸಿದ್ಧ್... ಸಡನ್‌ಲೀ ಶಿ ಸ್ಟಾರ್ಟೆಡ್ ಬಿಹೇವಿಂಗ್ ಅವೇಕನ್ಡ್... ಅಯಾಮ್ ಸ್ಪಿರಿಚುಅಲೀ ರಿಯಲೈಸ್ಡ್ ಅನ್ನತೊಡಗಿದಳು. ಬೆಳಿಗ್ಗೆ ರಾತ್ರಿ ಇದ್ದಲ್ಲೇ ಸುಮಾರು ಹೊತ್ತು ಸೂರು ನೋಡಿಕೊಂಡು, ಸ್ಕೈಲೈಟಾಚೆಗಿನ ಆಕಾಶ ನೋಡಿಕೊಂಡು ಕೂರುತ್ತಿದ್ದಳು. ಮುಖದಲ್ಲಿ ಅದೇನೋ ಸೆಳಕು. ಏನೋ ಆನಂದ. ಮನೆವಾರ್ತೆಯಲ್ಲಿ ಆಸಕ್ತಿಯಿಲ್ಲ. ಕೆಲಸಕ್ಕೆ ಹೋಗುಲ್ಲ... ಇನ್ನು ನಾನಂತೂ ಬೇಡವೇ ಬೇಡ. ಮುಟ್ಟಿದರೆ ಮುನಿ ಅಂತಾರಲ್ಲ ಹಾಗಾಗಿಬಿಟ್ಟಳು! ಎದುರಾದರೆ ಸಾಕು ಟಚ್ ಮಿ ನಾಟ್ ಅಂತ ಹಿಂಜರಿಯುವಳು!! ವಿಚಿತ್ರ ಅನಿಸತೊಡಗಿತು. ಸದಾ ಲೌಕಿಕದ ಎಲ್ಲದರಲ್ಲೂ ಇರುತ್ತಿದ್ದ ಹೆಣ್ಣು, ಹೀಗಾಗಿಬಿಟ್ಟರೆ? ಯಾವಾಗಲೂ ಧ್ಯಾನ. ಯಾವಾಗಲೂ ಟ್ರಾನ್ಸು... ಏನೋ ಮೆಡಿಟೇಶನ್ನು. ಓಂಕಾರ! ಏನು ಮಾಡಲಿ ಹೇಳು... ಈಗೀಗಂತೂ ದಿಕ್ಕೇ ತೋಚದಾಗಿದೆ...'

ಮಾ–ಳ ಚಹರೆ ಕಣ್ಣೆದುರು ಮೂಡಿಬಂತು. ಇಬ್ಬನಿಯಲ್ಲಿ ತೊಳೆದ ಹೂವಿನಂತಹ ಮೋರೆ. ಚಂದ್ರವನ್ನು ನಾಚಿಸುವಂಥದ್ದು. ಅವಳ ಹೆಸರೇ ಪೂರ್ಣೇಂದು. ಪೂರ್ಣೇಂದು ಮಂಜ್ರೇಕರ್. ತುಂಬಿಕೊಂಡ ಶುಕ್ಲಪಕ್ಷದ ಚಂದ್ರದ ಹಾಗೆ ಜೀವಕಾಂತಿ ತುಳುಕಿಕೊಂಡು ಸದಾ ಇದ್ದವಳು. ವೃತ್ತಿಗೆಂದು ನೆಚ್ಚಿರುವ ಆರ್ಕಿಟೆಕ್ಚರಿನಂತೆಯೇ ಮನೆವಾರ್ತೆಯಲ್ಲೂ ಓರಗೆಯವರಿಗಿಂತ ಒಂದು ಕೈ ಹೆಚ್ಚು ಮತ್ತು ಮುಂದು. ಎಲ್ಲತರಲ್ಲೂ ಒಪ್ಪ, ಒನಪು, ಓರಣವೆಂದೇ ಹೆಸರಾದವಳು. ದಿನದ ಕೆಲಸದ ತೀರಿದ ಮೇಲೆ, ಪಾ–ನೊಡನೆ ಬಾಲ್ಕನಿಯಲ್ಲಿ ಕುಳಿತು ಅವನ ಕೈಯಿಂದ ಕೆಲಗುಟುಕು ಬಿಯರು ಹೀರಿಕೊಂಡು, ಅವನು ಹಚ್ಚಿದ ಸಿಗರೇಟಿನಿಂದಲೇ ಒಂದೆರಡು ಪಫ್ಫುರುಬಿಕೊಂಡು ಆಗೀಗ ಆಕಾಶದಲ್ಲಿ ತಾರೆ ತೋರಿ ಎಣಿಸಿಕೊಂಡು ಸಂಪನ್ನವಾಗಿ ಕಳೆದುಹೋಗುತ್ತಿದ್ದಳು. ಎದುರು ಸಿಕ್ಕಾಗಲೆಲ್ಲ ನನ್ನನ್ನಪ್ಪಿಯೋ, ಹಿಂದಲೆ ತಡವಿಯೋ 'ಸಿದ್ಧ್ ಕಂದ... ನನ್ನ ಮುದ್ದು ನೀನು!' ಅಂತ ಅವಳೆತ್ತರ ಬೆಳೆದ ಮೇಲೂ ಮುದ್ದಿಸುವಳು... ಇನ್ನು ನನ್ನೀ ಪಾ–ನಿಗಾದರೂ, ನಾನೂ ಅವರಿಬ್ಬರಂತೆ ಆರ್ಕಿಟೆಕ್ಟಾಗಬೇಕೆನ್ನುವ ಆಸೆಯಿದ್ದಿತು. ನನಗೋ, ನಾನು ಅವರಿಬ್ಬರಷ್ಟು ಕ್ರಿಏಟಿವಲ್ಲವೆಂಬ ನಂಬಿಕೆ. ಸರಿ, ಪಾಲಿಟಿಕ್ಸನಲ್ಲಿ ಓದು ಮುಂದುವರೆಸುವೆನೆಂದಾಗ, ಎಳೆಬಳ್ಳಿಯಂತಹ ನನ್ನ ಆಸೆಗೆ ಇಂಬಿತ್ತು ಸಲಹಿದ್ದು ನನ್ನೀ ಮಾ–ಳೇ... 'ದಿವಸ್... ಯಾಕೆ ಅವನಿಗೆ ಆರ್ಕಿಟೆಕ್ಟಾಗೂಂತ ಹಿಂಸೆ ಕೊಡುತೀಯಾ? ಒಳ್ಳೇ ನಿರ್ಧಾರ ಕೈಗೊಂಡಿದ್ದಾನೆ. ಬಿಟ್ಟುಬಿಡು... ಅಷ್ಟರಮಟ್ಟಿಗೆ ಅವನು ಆರ್ಕಿಟೆಕ್ಟೇ ಆಗಬೇಕೂಂತಿದ್ದರೆ ಬೀಏ ಮುಗಿಸಿದ